ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 38 ಚಾಸಾ- 47**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸತೀಶ್ ಕೆ |
| ತಂದೆಯ ಹೆಸರುಃ | : | ಎಂ ಎನ್ ಕೃಷ್ಣಸ್ವಾಮಿ |
| ವಯಸ್ಸುಃ | : | 55 ವರ್ಷ |
| ಉದ್ಯೋಗಃ | : | ಶಾಖಾ ಮುಖ್ಯಸ್ಥರು ಆ್ಯಕ್ಸಿಸ್ ಬ್ಯಾಂಕ್ ಮೈಸೂರು |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 30-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2006 ರಿಂದ 2010ರವರೆಗೆ ನಾನು ಶಿವಮೊಗ್ಗ ಆ್ಯಕ್ಸಿಸ್ ಬ್ಯಾಂಕ್ ಶಾಖೆಯಲ್ಲಿ ಶಾಖಾ ಮುಖ್ಯಸ್ಥನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಸಿಐಡಿ ಎನ್ ಡಿ ಸಿ ಬೆಂಗಳೂರು ಇದರ ಪೊಲೀಸ್ ಉಪಾಧೀಕ್ಷಕರು 2010ರಲ್ಲಿ ಶಿವಮೊಗ್ಗದ ರಾಜು ಏಜೆನ್ಸಿಯವರು ನಮ್ಮ ಬ್ಯಾಂಕ್ ನಲ್ಲಿ ಹೊಂದಿರುವ ಖಾತೆಯನ್ನು ಹಾಗೂ ಅಕೌಂಟ್ ಓಪನಿಂಗ್ ಫಾರಂ ದಾಖಲೆಯನ್ನು ಕೇಳಿದ್ದರು. ಅದರಂತೆ ನಾನು ಪರಿಶೀಲಿಸಿ ರಾಜು ಏಜೆನ್ಸಿಯವರಿಗೆ ಸೇರಿದ ಖಾತೆ ಸಂಖ್ಯೆ362010200001342 ಇದರ ಓಪನಿಂಗ್ ಫಾರಂ ನ್ನು ದೃಢೀಕರಿಸಿ ಕೊಟ್ಟಿರುತ್ತೇನೆ. ಅದು ಒಟ್ಟು 4 ಹಾಳೆಗಳನ್ನು ಒಳಗೊಂಡಿರುತ್ತದೆ. ಅದನ್ನು ಈಗ ನೋಡುತ್ತಿದ್ದು ನಿಪಿ-76 ಎಂದು ಗುರುತಿಸಲಾಯಿತು. ಅದನ್ನು ದೃಢೀಕರಿಸಿ ಕೊಟ್ಟ ಬಗ್ಗೆ ಪ್ರತಿ ಪುಟಕ್ಕೂ ಸಹಿ ಹಾಕಿದ್ದು ಒಟ್ಟಾಗಿ ನಿಪಿ-76(ಎ) ಎಂದು ಗುರುತಿಸಲಾಯಿತು. ಆ ಅರ್ಜಿಗಳ ಜೊತೆಗೆ ರಾಜು ಏಜೆನ್ಸಿಯವರು ಸಲ್ಲಿಸಿದ್ದ ಇನ್ನೂ 3 ದಾಖಲೆಗಳನ್ನು ದೃಢೀಕರಿಸಿ ಕೊಟ್ಟಿರುತ್ತೇನೆ. ಅವುಗಳನ್ನು ನೋಡುತ್ತಿದ್ದು ನಿಪಿ-76(1)ಎಂದು

ಗುರುತಿಸಲಾಯಿತು. ಅದನ್ನು ದೃಢೀಕರಿಸಿದ ಬಗ್ಗೆ ನನ್ನ ರುಜು ಇದ್ದು ಅವುಗಳನ್ನು ಒಟ್ಟಾಗಿ ನಿಪಿ-76(1ಎ) ಎಂದು ಗುರುತಿಸಲಾಯಿತು. ನಾನು ದೃಢೀಕರಿಸಿ ಕೊಟ್ಟಿರುವ ಅಕೌಂಟ್ ಸ್ಟೇಟ್ಮೆಂಟನ್ನು ನೋಡುತ್ತಿದ್ದು ಅದು 3 ಹಾಳೆಗಳನ್ನೊಳಗೊಂಡಿದ್ದು ಅದನ್ನು ನಿಪಿ-77 ಎಂದು ಸಾಕ್ಷಿ ಗುರುತಿಸಿದ ಸಾಕ್ಷಿಯ ರುಜುವನ್ನು ಒಟ್ಟಾಗಿ ನಿಪಿ-77(ಎ) ಎಂದು ಗುರುತಿಸಲಾಯಿತು.

3.ದಿನಾಂಕ 4-2-2010ರಂದು ರಾಜು ಏಜೆನ್ಸಿಯವರಿಗೆ ಸೇರಿದ ಅಕೌಂಟ್ ಸ್ಟೇಟ್ಮೆಂಟನ್ನು ದೃಢೀಕರಿಸಿ ಪತ್ರದೊಂದಿಗೆನೀಡಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-78 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-78(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಸ್ಟೇಟ್ಮೆಂಟ ಒಟ್ಟು 15 ಹಾಳೆಗಳನ್ನು ಒಳಗೊಂಡಿದ್ದು ಅದನ್ನು ನಿಪಿ-79 ಎಂದು  ಗುರುತಿಸಲಾಯಿತು. ನಿಪಿ-79ಕ್ಕೆ ನಮ್ಮ ಬ್ಯಾಂಕಿನ ಅಧಿಕಾರಿ ಆಗಿದ್ದ ಗಾಯತ್ರಿಯವರು ದೃಢೀಕರಿಸಿ ಸಹಿ ಮಾಡಿರುತ್ತಾರೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ನಿಪಿ-79ರಲ್ಲಿ ನನ್ನ ಸಹಿ ಇರುವುದಿಲ್ಲ. 2010ರಲ್ಲಿ ಜಿ ಎಸ್ ಟಿ ಇರಲಿಲ್ಲ ಎಂದರೆ ನಿಜ.

**ಪಾಟೀಸವಾಲುಃ 2ನೇ ಆರೋಪಿ ಪರ** ಶ್ರೀ ಜೆ ಎಸ್ **ವಕೀಲರಿಂದಃ**

(ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ).

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**